ದಂಡೆಯಲ್ಲೇ ಇದ್ದ ಒಂದು ಗರುಡಾಳ ಪಕ್ಷಿ. ಹುತ್ತದಿಂದ ಈಚೆ ಕಡೆಗೆ ಹಾವು ಬರುವ ಟೈಮನ್ನೇ ಕಾದುಕೊಂಡು ಕೂತಿದೆ. ಯಲಾ ಯಲಾ ಈ ಗರುಡಾಳ ಎಷ್ಟೊತ್ತಾದರೂ ಎದ್ದು ಹೋಗದೇ ನಾನು ಬರದನ್ನೇ ಕಾದುಕೊಂಡು ಕೂತಿದೆಯಲ್ಲಾ ಅಂತ ಸಿಟ್ಟು ಹತ್ತಿ ಹೊರಗೆ ಬಂದು ಪಕ್ಷಿ ಕಾಲು ಹಿಡಿಯಿತು. ಗರುಡಾಳ ಸರ್ಪನ ಹೊರಗಡೆ ಎಳೀಬೇಕು ಅಂತ. ಸರ್ಪ ಗರಡಾಳನ್ನ ಒಳಗೆ ಎಳಿಬೇಕು ಅಂತ ಕಚ್ಚಾಟ ನಡೀತಾದೆ. ಭದ್ರಗೊಮಾರ ಅಣ್ಣಗೊಳಾ ಆ ಹಾವುನ್ನೂ, ಗರಡಾಳನ್ನೂ ಹೆಂಗಾದುರೂ ಬಿಡಿಸ್ರೀ ಅಂತ ಹೇಳಿದ. ಆಗ ರುದ್ರಗೊಮಾರನಿಗೆ ಮಾಮೇರಿ ಕೋಪ ಉಕ್ಕಿ ಯಲ ಯಲಾ ಇವನಜ್ಜಿನಾಡ ಈ ಸರ್ಪದ ಬಾಯಿಗೆ ನಮ್ಮನ್ನ ಕೊಟ್ಟು ತಾನು ಓಡೋಗಾನ ಅಂತ ಮಾಡ್ತಾವುನಲ್ಲ, ಇವನೆಂಥಾ ಘಾತಕನಿರಬೋದು ಅಂತಂದ. ಭದ್ರಗೊಮಾರ ಈ ಮಾತನ್ನ ಕೇಳಿಸಿಕೊಂಡು ಕೈಲಿದ್ದ ಕಠಾರಿಯಿಂದ ತನ್ನ ಒಳದೊಡೆ ಮಾಂಸ ಕತ್ತರಿಸಿ ಸರ್ಪದ ಬಾಯಿಗೆ ಹಿಡಿದ. ಸರ್ಪ ಗರುಡಾಳ ಪಕ್ಷಿಯನ್ನು ಬಿಟ್ಟಿತು. ಅದು ಸದ್ಯ ಬದುಕಿದೆನಲ್ಲಾ ಪರಮಾತ್ಮ ಅಂತ ಹಾರೊಯ್ತು. ಹಾರಿ ಹೋಗುವಾಗ ಆ ಗರುಡಾಳನು ಅಯ್ಯಾ ನರಮಾನವನೇ ನೀನು ನನ್ನ ಕಷ್ಟ ತಪ್ಪಿಸಿದೆ. ನಿಂಗೂ ಇದೇ ಥರ ಏನಾದರೂ ವಿಪತ್ತು ಬಂದರೆ ನನ್ನ ನೆನೆಸಿಕೋ. ಬಂದು ಕೈಲಾದದ್ದು ಮಾಡುವೆನು ಅಂತೇಳಿ ಹೋಯ್ತು. ಸರಿ ಅಲ್ಲಿಂದ ವಾಯುವೇಗದಲ್ಲಿ ಬಂದ ಭದ್ರಗೊಮಾರನು ರುದ್ರಗೊಮಾರ, ರೈತಗೊಮಾರನ್ನ ಸೇರಿಕೊಂಡ. ರೈತಗೊಮಾರನಿದ್ದು, ಯಲಾ ಈ ಮುಂಡೇಮಗ ಹಾವಿನ ಬಾಯಿಗೆ ಸಿಕ್ಕಿಕೊಂಡು ಸಮಾಧಿ ಕಟ್ಕತನೆ ಅಂದ್ರೆ ಇಲ್ಲೇ ಬತ್ತಾವನೆ ನೋಡಣ್ಣ ಅಂದ. ಸರಿ, ಮೂರು ಜನರೂ ಬರುತಲವರೇ. ಅಲ್ಲೊಬ್ಬ ಋಷಿ ಮುನಿ ಸಿಕ್ಕಿದ. ಅವನು ಈ ಹುಡುಗರನ್ನ ಕಂಡು ಅಪ್ಪಾ ಹುಡುಗರಾ ಈ ವಯಸಿನಲ್ಲೇ ವನಾಂತರದ

